ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ಮಕ್ಕಳ ವಿವರ

179(23) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು ; (ಸರ್ಕಾರಿ/ಅನುದಾನಿತ/ ಅನುದಾನರಹಿತ ಖಾಸಗಿ ಶಾಲೆಗಳ ಪ್ರತ್ಯೇಕ ವಿವರ ನೀಡುವುದು)

(ಆ) ಈ ಪೈಕಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಎಷ್ಟು?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

(ಅ) ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ ಈ ಕೆಳಕಂಡಂತಿದೆ.

ಸರ್ಕಾರಿ	ಅನುದಾನಿತ	ಅನುದಾನರಹಿತ	ಒಟ್ಟು
2807449	488488	2016196	5312133

ಆ)ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಸಂಖ್ಯೆ

ಸರ್ಕಾರಿ	ಅನುದಾನಿತ	ಅನುದಾನರಹಿತ	ಒಟ್ಟು
2542923	409842	1103903	4056668

ಬೆಂಗಳೂರು ನಗರದಲ್ಲಿರುವ ಬಾರ್ ಮತ್ತು ಮದ್ಯದಂಗಡಿಗಳ ವಿವರ

180(24) ಶ್ರೀ ಸುರೇಶ್ ಕುಮಾರ್ ಎಸ್.(ರಾಜಾಜಿನಗರ) :– ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಬಾರ್ ಮತ್ತು ಮದ್ಯದಂಗಡಿಗಳ ಸಂಖ್ಯೆ ಎಷ್ಟು;

(ಆ) ಬಾರ್ ಮತ್ತು ಮದ್ಯದಂಗಡಿಗೆ ನಿಗದಿಪಡಿಸಿರುವ ಪ್ರತಿನಿತ್ಯ ಕಾಲಾವಧಿ ಏನು;

(ಇ) ಈ ನಿಯಮಗಳನ್ನು ಉಲ್ಲಂಘಿಸಿರುವ ಪ್ರಕರಣಗಳಲ್ಲಿ ಇಲಾಖೆ ಕೈಗೊಂಡಿರುವ ಕ್ರಮಗಳಾವುವು ?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಅಬಕಾರಿ ಸಚಿವರು):–

(ಅ) ಬೆಂಗಳೂರು ನಗರದಲ್ಲಿ 1356 ಬಾರ್ ಮತ್ತು ರೆಸ್ಟೋರೆಂಟ್ (ಸಿಎಲ್–9) ಹಾಗೂ 863 ಮದ್ಯದಂಗಡಿಗಳು (ಸಿಎಲ್–2) ಇರುತ್ತವೆ.

(ಆ)

ಸನ್ನದು ವಿಧ	ವಾರ	ಕಾಲಾವಧಿ
ಮದ್ಯದಂಗಡಿಗಳು (ಸಿಎಲ್–2)	ಸೋಮವಾರ ದಿಂದ ಭಾನುವಾರ	ಬೆಳಿಗ್ಗೆ 10.00 ಗಂಟೆಯಿಂದ ರಾತ್ರಿ 10.30
ಬಾರ್ ಮತ್ತು ರೆಸ್ಟೋರೆಂಟ್ (ಸಿಎಲ್–9)	ಸೋಮವಾರ ದಿಂದ ಗುರುವಾರ ಮತ್ತು ಭಾನುವಾರ	ಬೆಳಿಗ್ಗೆ 10.00 ಗಂಟೆಯಿಂದ ರಾತ್ರಿ 11.30
ಬಾರ್ ಮತ್ತು ರೆಸ್ಟೋರೆಂಟ್ (ಸಿಎಲ್–9)	ಶುಕ್ರವಾರ ಮತ್ತು ಶನಿವಾರ	ಬೆಳಿಗ್ಗೆ 10.00 ಗಂಟೆಯಿಂದ ರಾತ್ರಿ 1.00

ಅಧಿಸೂಚನೆ ಸಂಖ್ಯೆ: ಇಸಿಇ/28/ಸಾ.ಐ.ಎಂ.ಎಲ್/2013–14, ದಿನಾಂಕ 11.06.2014ರಲ್ಲಿ ಹೊರಡಿಸಲಾದ ಸೂಚನೆಗಳನ್ವಯ ಬೆಂಗಳೂರು ನಗರ ಪೊಲೀಸ್ ಆಯುಕ್ತರ ಕಾರ್ಯವ್ಯಾಪ್ತಿಯಲ್ಲಿನ ಸಿಎಲ್–9 ಸನ್ನದುಗಳ ವಹಿವಾಟಿನ ಅವಧಿಯನ್ನು ದಿನಾಂಕ: 30.06.2015ರವರೆಗೆ ಶುಕ್ರವಾರ ಮತ್ತು ಶನಿವಾರಗಳಂದು ತಡರಾತ್ರಿ 1.00 ಗಂಟೆಯವರೆಗೆ ವಿಸ್ತರಿಸಲಾಗಿರುತ್ತದೆ.

(ಇ) ಮದ್ಯ ಮಾರಾಟ ಸನ್ನದುಗಳಲ್ಲಿ ನಿಗದಿತ ಸಮಯ ಪಾಲನೆಯನ್ನು ಉಲ್ಲಂಘಿಸಿರುವ ಪ್ರಕರಣಗಳು ಸನ್ನದು ಷರತ್ತು ಉಲ್ಲಂಘನೆ ಪ್ರಕರಣಗಳಾಗಿದ್ದು ಹಾಗೂ ಇವುಗಳನ್ನು ದಂಡ ವಿಧಿಸಿ ಇಲಾಖಾ ಮುಖಾಂತರ ಇತ್ಯರ್ಥಪಡಿಸಬಹುದಾಗಿದೆ.

ವಿಕಲಚೇತನ ಮಕ್ಕಳಿಗೆ ಶೈಕ್ಷಣಿಕ ವ್ಯವಸ್ಥೆ

181(89) **ಶ್ರೀ ಸುರೇಶ್ ಕುಮಾರ್ ಎಸ್.(ರಾಜಾಜಿನಗರ)** :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ವಿಕಲಚೇತನ (ವಿಶಿಷ್ಠ) ಮಕ್ಕಳನ್ನು ಆರೋಗ್ಯ ಕಾರಣಗಳಿಗಾಗಿಯಷ್ಟೆ ನೋಡಬ್ಯೇಕೆ ಮಾನವ ಹಕ್ಕಿನ ವ್ಯಾಪ್ತಿಯಲ್ಲಿ ಪರಿಗಣಿಸಿ ಅವರಿಗೆ ಶೈಕ್ಷಣಿಕ ವ್ಯವಸ್ಥೆ ಮುಖ್ಯವಾಹಿನ್ಯಲ್ಲಿ ಶಿಕ್ಷಣ ನಿಡಬೇಕಾದ ಸಮಾನ ಅವಕಾಶಗಳನ್ನು ಒದಗಿಸಬೇಕಾದ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ;